

# ವೇಣುಗೋಪಾಲ ಸೊರಬ

**(1937–1995)**

ಕನ್ನಡದ ಪ್ರಮುಖ ಕವಿ, ಕತೆಗಾರ, ಕಾದಂಬರಿಕಾರ ವೇಣುಗೋಪಾಲ ಸೊರಬ ಅವರ ಊರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ. ತಂದೆ ರಾಮರಾವ್ ಸೊರಬ, ತಾಯಿ ಸೀತಾಬಾಯಿ.

ಅವರ ಆರಂಭಿಕ ವಿದ್ಯಾಭ್ಯಾಸ– ಚಳ್ಳಕೆರೆ, ಹರಿಹರ ಹಾಗೂ ಶಿವಮೊಗ್ಗಗಳಲ್ಲಿ. ಬಳಿಕ ಮೈಸೂರಿನ ಮಹಾರಾಜ ಕಾಲೇಜಿನಿಂದ ಬಿ.ಎ. ಪದವಿ ಹಾಗೂ ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಕನಕಪುರ ರೂರಲ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಬಹುಕಾಲ ಸೇವೆ ಸಲ್ಲಿಸಿದ ಅವರು ಬಳಿಕ ಬೆಂಗಳೂರಿನ ಎನ್.ಎಂ.ಕೆ.ಆರ್.ವಿ.ಮಹಿಳಾ ಕಾಲೇಜಿನಲ್ಲೂ ಕೆಲಸ ಮಾಡಿದ್ದರು. 12 ಕವನ ಸಂಕಲನಗಳು, ಐದು ಕಾದಂಬರಿಗಳು, ಒಂದು ಕಥಾ ಸಂಕಲನ, ಒಂದು ಪ್ರಬಂಧ ಸಂಕಲನದ ಲೇಖಕ ವೇಣುಗೋಪಾಲ ಸೊರಬ.

'ಧಾರೆ', 'ಪ್ರಮೇಯ', 'ಮಾನವಿ' ಅವರ ಪ್ರಮುಖ ಕವನ ಸಂಗ್ರಹಗಳಾದರೆ, 'ಜೀವ ಜೀವಂತ', 'ಲೂಸಿ', 'ಸವಾಲು', 'ಸುಳ್ಳು ಬುರುಕಿ', 'ಹೂ ಹಿಗ್ಗು' ಅವರ ಇನ್ನಿತರ ಕವನ ಸಂಗ್ರಹಗಳಾಗಿವೆ. ಹಿರಿಯ–ಕಿರಿಯ ಕವಿಗಳ ವ್ಯಕ್ತಿ ಚಿತ್ರಗಳ ಕವಿತೆಗಳು 'ಬಿಂಬ' ಸಂಗ್ರಹದಲ್ಲಿವೆ. 'ಉತ್ಸವ' ಅವರ ಕಥಾ ಸಂಕಲನವಾಗಿದೆ. 'ಕನಕಪುರ ತಾಲ್ಲೂಕು ದರ್ಶನ', 'ಸಮಕಾಲೀನ ಪಡೆ ನುಡಿ' ಅವರ ಇನ್ನಿತರ ಕೃತಿಗಳಾಗಿವೆ. 'ಬಯಲಾಗದ ಜನ', 'ಸರೀಕರು', 'ಅನಾಥ ಪ್ರಭು', 'ಅಲ್ಲದೆ ಪ್ರಸಂಗ', 'ಸೋಲುಗಳೇ ಇಲ್ಲ' ಸೊರಬರು ಬರೆದ ಕಾದಂಬರಿಗಳಾಗಿವೆ. ಇದೆಲ್ಲದೇ ಕೆಲವು ಅನುವಾದಿತ ಪುಸ್ತಕಗಳನ್ನು ಪ್ರಕಟಿಸಿರುವ ಅವರು, ಮಕ್ಕಳ ಸಾಹಿತ್ಯವನ್ನೂ ಬರೆದಿದ್ದಾರೆ.

ನನ್ನನ್ನು ನೋಡುತ್ತಿರುವ ಅವಳು ನನಗೀಗ ಸುಂದರವಾಗಿ ಕಾಣುತ್ತಾಳೆ. ಮ್ಲಾನತೆ ತಂದುಕೊಡುವ ಸೌಂದರ್ಯದಲ್ಲಿ ಮಾನವೀಯ ಅಂಶವೇ ಪ್ರಮುಖವೇನೋ.

ನಾನು ನಿಲ್ಲದಂತೆ ಹೆಜ್ಜೆ ಹಾಕುತ್ತೇನೆ. ನನ್ನನ್ನು ಕಚ್ಚಿಗೊಂಡಂತೆ ಬರುವ ಅವಳು 'ಎಲ್ಲಿಗೆ ಹೊರಟಿದ್ದೀರಿ?' ಎಂದು ಕೇಳುತ್ತಾಳೆ.

ನಾನು ಹಿಂತಿರುಗಿ ನೋಡಿ, ಸುಮ್ಮನೆ ಮುಂದೆ ನಡೆಯುತ್ತೇನೆ.

ಅವಳ ಕಣ್ಣು ಕೆಂಪಾಗಿರುವಂತೆ ಕಾಣುತ್ತದೆ.

ಬೃಂದಾವನ್ ಹೋಟೇಲಿನ ಮೆಟ್ಟಲು ಹತ್ತುತ್ತಿದ್ದಂತೆ, ಕೆಳಗಿಳಿಯುತ್ತಿರುವ ವೃದ್ಧ ದಂಪತಿ